**<u>ಸಾಕ್ಷಿಯನ್ನು ದಿನಾಂಕಃ06.07.2026 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>**

**<u>ಪಾಟಿ ಸವಾಲುಃ ಅರೋಪಿ ಪರ ಶ್ರೀ ಸಿ ಅರ್ ಕೆ ವಕೀಲರಿಂದ.</u>**

1. ಪಿರ್ಯಾದಿ/ಚಾಸಾ-1 ನನ್ನ ಅತ್ತಿಗೆ. ಚಾಸಾ-4 ಶಶಿಕಲಾ ಚಾಸಾ-1 ರವರ ಮಗಳು. ಚಾಸಾ-5 ಶ್ರೀಕಾಂತ್ ರವರು ಚಾಸಾ-1 ರವರ ಅಣ್ಣನ ಮಗ. ಚಾಸಾ-6 ಚಲಪತಿ ರವರು ಮೃತಪಟ್ಟಿರುತ್ತಾರೆ. ನಾವೆಲ್ಲರೂ ಒಂದೇ ಜಾತಿಯವರು ಎಂದರೆ ಸರಿ. ಈ ದಿನ ನನ್ನನ್ನು ಚಾಸಾ-1 ನಾರಾಯಣಮ್ಮರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಚಾಸಾ-4 ರವರನ್ನು ಕರಡಗೂರುಗೆ ಮದುವೆ ಮಾಡಿಕೊಡಲಾಗಿದೆ ಹಾಗೂ ಆಕೆ ಅದೇ ಊರಿನಲ್ಲಿ ನರ್ಸ ಅಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಆರೋಪಿಗೆ ರೂ.500 ನೀಡಿದ್ದು, ಆತ ನನಗೆ ಸದರಿ ಹಣವನ್ನು ವಾಪಸ್ಸು ನೀಡಿರಲಿಲ್ಲ. ಈ ವಿಷಯವಾಗಿ ನನಗೆ ಮತ್ತು ಅರೋಪಿಗೆ ಗಲಾಟೆ ಅಗಿತ್ತು. ಸದರಿ ಗಲಾಟೆಯನ್ನು ಚಾಸಾ-1 ರವರು ಬಿಡಿಸಲು ಬಂದಿದ್ದು, ಆಗ ಅರೋಪಿ ಆಕೆಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. ನನಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿ.
2. ಅರೋಪಿಯು ತನ್ನ ಊರಿನಲ್ಲಿ ಅಂಗಡಿ ಇಟ್ಟಿದ್ದನೆ ಎಂದರೆ ಸರಿ. ನಾನು ಸದರಿ ಅಂಗಡಿಯಲ್ಲಿ ಸಮಾನು ತರುತಿದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ಗಲಾಟೆಯಾದ ನಂತರ ಅರೋಪಿಯು ಅಂಗಡಿ ಮುಚ್ಚಿರುತ್ತಾನೆ ಎಂದು ನುಡಿಯುತ್ತಾರೆ. ನನ್ನ ಮತ್ತು ಆರೋಪಿ ನಡುವೆ ಮೇಲೆ ಹೇಳಿದ ಹಣದ ಬಗ್ಗೆ ಗಲಾಟೆ ಅಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಗಲಾಟೆಯ ಬಗ್ಗೆ ನಾನು ಯಾವುದೇ ದೂರನ್ನು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಅದೇ ದಿನ ಸಂಜೆ 7.00 ಗಂಟೆಗೆ ನನ್ನ ಮತ್ತು ಅರೋಪಿಯ ನಡುವೆ ಗಲಾಟೆ ಅಗಿರುತ್ತದೆ. ಗಲಾಟೆ ಸಮಯ ಸುಮಾರು 4-5 ಜನ ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ಸದರಿ ಗಲಾಟೆಯನ್ನು ಬಿಡಿಸಲು ಬಂದಿದ್ದ 4-5 ಜನರ ಪೈಕಿ, ಈಗಾಗಲೇ ಚಾಸಾ-3 ಶ್ರೀನಿವಾಸ್ ಮತ್ತು ಚಾಸಾ-6 ಚಲಪತಿರವರು ಮೃತಪಟ್ಟಿರುತ್ತಾರೆ. ನನ್ನ ಮತ್ತು ಅರೋಪಿ ನಡುವೆ ಗಲಾಟೆ ಅಗುವ ಕಾಲಕ್ಕೆ ಚಾಸಾ-1 ನಾರಾಯಣಮ್ಮ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಘಟನ ಸ್ಥಳಕ್ಕೂ ಹಾಗೂ ಆಂಬೇಡ್ಕರ್ ಪ್ರತಿಮೆಗೂ ಸುಮಾರು 30 ಅಡಿ ದೂರು ಇರುತ್ತದೆ. ಆ ಸ್ಥಳದಿಂದ ಸ್ವಲ್ಪ ದೂರದಲ್ಲಿ ಗಂಗಮ್ಮ ದೇವಸ್ಥಾನ ಮತ್ತು ಸತ್ಯಮ್ಮ ದೇವಸ್ಥಾನ ಇರುತ್ತದೆ. ಗಲಾಟೆ ಸಮಯದಲ್ಲಿ ಮೇಲೆ 4-5 ಜನರು ಬಿಟ್ಟರೆ, ಬೇರೆ ಜನ ಇರಲಿಲ್ಲ. ಗಲಾಟೆ

**ಪಿಡಬ್ಲ್ಯೂ:5**

ಸಮಯದಲ್ಲಿ ನಾನು ಮದ್ಯಪಾನ ಮಾಡಿದ್ದೆ ಎಂದರೆ ಸರಿ. ನಾರಾಯಣಮ್ಮ ಬುದ್ದಿವಾದ ಹೇಳಿದ ಬಗ್ಗೆ ನಾನು ಪೋಲಿಸರಿಗೆ ಹೇಳಿಲ್ಲ. ಅರೋಪಿಯು ಕಲ್ಲಿನಿಂದ ಚಾಸಾ-1 ರವರಿಗೆ ಹೊಡೆದ ವಿಷಯವನ್ನು ನಾನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿ. ನಾನು ಪೋಲಿಸ್ ಠಾಣೆಗೆ ಹೋಗಿಲ್ಲ ಹಾಗೂ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಚಾಸಾ-4 ಶಶಿಕಲಾ, ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಸೇರಿಸಿಲ್ಲ ಎಂದರೆ ಸಾಕ್ಷಿಯು ಚಾಸಾ-4 ರವರು ತನ್ನ ಗಂಡನ ಮನೆಯಿಂದ ಚಾಸಾ-1 ರವರನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿರುವುದಿಲ್ಲ. ಅರೋಪಿಯು ಹಲ್ಲೆ ಮಾಡಿಲ್ಲ, ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ಅರೋಪಿ ನಡುವೆ ಜಗಳವಾದ ಕಾರಣ, ಅದೇ ದ್ವೇಷದಿಂದ, ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಯಿತು**)

**ಓ.ಹೇ.ಕೇ.ಸ.ಇದೆ**

**(ಮಾಯಣ್ಣ.ಬಿ.ಎಲ್)**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೋಲಾರ**